ನಾನು ಗಮನಿಸಿದ್ದು ಒಂದು ಸುಭಾಷಿತದಲ್ಲಿ. ''ಯಸ್ಯ ನಾಸ್ತಿ ಸ್ವಯಂ ಪ್ರಜ್ಞಾ, ಶಾಸ್ತ್ರಂ ತಸ್ಯ ಕರೋತಿ ಕಿಂ'' – ''ಯಾರಿಗೆ ಸ್ವಂತ ಬುದ್ಧಿ ಇಲ್ಲವೋ ಅವನಿಗೆ ಶಾಸ್ತ್ರವೇನು ಮಾಡುತ್ತದೆ?'' ಎಂಬುದು ಬರಿಯ ವಿಡಂಬನೆಯಲ್ಲ, ಮರ್ಮಭೇದಕ ಮಾತು. ಅದಕ್ಕೆ ರೂಪಕವಾಗಿ ಈ ಸುಭಾಷಿತ ನೀಡುವ ಚಿತ್ರ ಕುರುಡ ಮತ್ತು ಕನ್ನಡಿಯದು. ಸ್ವಯಂಪ್ರಜ್ಞೆಯ ಕಣ್ಣಿನಿಂದ ಶಾಸ್ತ್ರದ ದರ್ಶನ ಸಾಧ್ಯ. 'ಗಿಣಿಯೋದು ಪುಸ್ತಕ ಜ್ಞಾನ. ನಿನ್ನನುಭವವೆ ನಿನಗೆ ಧರುಮದ ದೀಪ.' ಸ್ವಾನುಭವಕ್ಕೂ ಮೊದಲು ಸ್ವಯಂ ಪ್ರಜ್ಞೆಯು ಜ್ಞಾನದ ಮಥನ ಮಾಡಬೇಕು.



ಬುದ್ಧಿಹೀನರಾಗುವುದು ಅಥವಾ ಹೀನಬುದ್ಧಿಯವರಾಗುವುದು ಎರಡೂ ಅಪಾಯಕಾರಿ ಪ್ರವೃತ್ತಿಗಳೇ. ನಮ್ಮ ಬುದ್ಧಿಯನ್ನು ಸಲಹುವಲ್ಲಿ ಎಷ್ಟು ಎಚ್ಚರವಾಗಿದ್ದರೂ ಸಾಲದು ಎಂದೇ ತೋರುತ್ತದೆ. ಬುದ್ಧಿಯ ಎಲ್ಲ ಸಾಹಸ, ದುಡುಕುವಿಕೆ, ತೊಡಗುವಿಕೆಗಳು ಅಂತಿಮವಾಗಿ ಆಧ್ಯಾತ್ಮಿಕವೇ. ಪ್ರಶ್ನಿಸುತ್ತ ಬೆಳಕು ಕಾಣಲೆತ್ನಿಸುವುದು ಬುದ್ಧಿಯ ಸ್ವಭಾವ. ''ಪ್ರಶ್ನೆ ಸ್ವತಃ ತಾನೇ ಪ್ರಜ್ಞೆಯಲ್ಲ, ಬೆಳಕಲ್ಲ, ಆದರೆ ಪ್ರಜ್ಞೆಯ ಸ್ಥಿತಿ ಮುಟ್ಟಿ ಬೆಳಕು ಕಾಣುವ – ತಾನೇ ಬೆಳಕಾಗುವ ಅಭೀಪ್ಸವುಳ್ಳದ್ದು'' ಎಂಬ ಕತೆಗಾರ ಯಶವಂತ ಚಿತ್ತಾಲರ ಮಾತನ್ನಿಲ್ಲಿ ನೆನೆಯಬಹುದು.

ಪ್ರಶ್ನಾರ್ಥಕ ಚಿಹ್ನೆಯನ್ನು ಕಾಲೇಜಿನ ಸಭಾಂಗಣದಲ್ಲಿ ಎಲ್ಲರಿಗೂ ಕಾಣುವಂತೆ ದೊಡ್ಡ ಫಲಕ ಮಾಡಿ ತೂಗಿ ಹಾಕಿಸಿದ್ದರು ವಿಚಾರವಾದಿ ಎಚ್. ನರಸಿಂಹಯ್ಯನವರು. ತರುಣ ವಿದ್ಯಾರ್ಥಿಗಳು ಪ್ರಶ್ನಿಸುವ ಮನೋಭಾವ ಬೆಳೆಸಿಕೊಳ್ಳಬೇಕೆಂದು ಅವರು ಬಯಸಿದರು. ಪ್ರಶ್ನಿಸದೇ ಹಳೆಯ ಆಚರಣೆಗಳ ಮಿತಿ ತಿಳಿಯಲು ಸಾಧ್ಯವಿಲ್ಲ, ಹೊಸ ಮಾರ್ಗಕ್ಕೆ ಅಡಿ ಇಡಲು ಸಾಧ್ಯವಿಲ್ಲ. ''ಯಾವನು ಯಾವಾಗಲೂ ಪ್ರಶ್ನೆ ಮಾಡುತ್ತಾನೋ, ಕಿವಿಗೊಟ್ಟು ಕೇಳುತ್ತಾನೋ ಮತ್ತು ಯಾವಾಗಲೂ ಚೆನ್ನಾಗಿ ಮನದಟ್ಟು ಮಾಡಿಕೊಳ್ಳುತ್ತಾನೆಯೋ ಅವನ ಬುದ್ಧಿಯು ಸೂರ್ಯಕಿರಣಗಳಿಂದ ತಾವರೆಯು ಅರಳುವಂತೆ'' ವಿಕಾಸಗೊಳ್ಳುವುದೆಂದು ಪಂಚತಂತ್ರದಲ್ಲಿದೆ. ಮನುಷ್ಯ 'ಬುದ್ಧಿ ಉಳ್ಳ ಪ್ರಾಣಿ' ಎನ್ನುವಾಗಲೂ ಅವನು ಅದನ್ನು ಕಳೆದುಕೊಳ್ಳುವುದೂ ಉಂಟು, ಬಾಳಿನಾದ್ಯಂತ ಸಂಪಾದಿಸುವುದೂ ಉಂಟು ಎಂಬುದನ್ನೂ ಮರೆಯಬಾರದು. ನಮ್ಮ ಉಪನಿಷತ್ತುಗಳು ಗುರು ಶಿಷ್ಯರಿಬ್ಬರೂ ಒಟ್ಟಾಗಿ ಸತ್ಯ ತಿಳಿಯಬೇಕೆಂದು ಬಯಸಿದವು. ಇದೊಂದು ನಿರಂತರ ಪ್ರಕ್ರಿಯೆ. 'ಕಸ್ತ್ವಂ, ಕೋಹಂ, ಕುತ ಆಯಾತಃ' ಮುಂತಾಗಿ ಪ್ರಶ್ನಿಸಿಕೊಂಡು ಲೋಕದ ಸಂಗತಿಗಳಲ್ಲಿ ಸಾರವಾದುದು ಏನು, ಅಸಾರವಾದುದು ಎಷ್ಟು ಎಂದು ಚಿಂತಿಸಬೇಕೆಂದು ಶಂಕರಾಚಾರ್ಯರೂ ಬೋಧಿಸಿದರು. ಪರಮಹಂಸ, ರಮಣರೂ ಅಧ್ಯಾತ್ಮದಲ್ಲಿ ವಿಚಾರದ ಮಹತ್ವ ಪ್ರತಿಪಾದಿಸಿದರು. ಬುದ್ಧಿಯ ಈ ವಿಲಾಸ, ವಿಹಾರ, ವಿಕಾಸಗಳನ್ನು ಅಸಹನೆಯಿಂದ ಕಾಣುವುದು ನಿರಂಕುಶ ಸರ್ವಾಧಿಕಾರದ ಲಕ್ಷಣ. ಅದು ಬೌದ್ಧಿಕ ಸ್ವಾತಂತ್ರ್ಯವನ್ನು ಸದಾ ಅಸಹನೆಯಿಂದ ಮತ್ತು ಅನುಮಾನದಿಂದ ಕಾಣುತ್ತ ಬಂದಿದೆ. ಅದಕ್ಕೆ ಇತಿಹಾಸದಲ್ಲಿ ನೂರಾರು ಉದಾಹರಣೆಗಳಿವೆ.

ನಮ್ಮ ಬುದ್ಧಿ ನಮಗೆ ತೋರಿಸಿದ್ದಕ್ಕಿಂತ ಭಿನ್ನವಾಗಿ ಇನ್ನೊಬ್ಬ ಒಂದು ವಿಷಯವನ್ನು ಗ್ರಹಿಸಿರುವುದು ಸಾಧ್ಯವಿದೆ ಮತ್ತು ಯಾರಿಗೆ ಗೊತ್ತು, ಅದೇ ಸತ್ಯವಾಗಿರಬಹುದು ಎಂದು ಒಪ್ಪಿಕೊಳ್ಳಲು ಅಸಾಧಾರಣ ಧೈರ್ಯ ಬೇಕು. ಎಲ್ಲ ರೀತಿಗಳಲ್ಲಿ ಅತ್ಯಾಧುನಿಕನಾಗಿ ಕಾಣುವ ವ್ಯಕ್ತಿ ಬೌದ್ಧಿಕವಾಗಿ ತೆರೆದ ಮನಸಿನವನಾಗದೇ ಇರಬಹುದು. ಆದರೆ ಆಧುನಿಕ ಯಂತ್ರೋಪಕರಣ, ವೇಷಭೂಷಣಗಳ ಆವರಣ ನಮ್ಮನ್ನು ವಂಚಿಸಬಹುದು. ಇದೊಂದು ವಿಚಿತ್ರ ಸನ್ನಿವೇಶ, ನಿಜ. ಆದರೆ ಹೆಜ್ಜೆ ಹೆಜ್ಜೆಗೆ ಅಂಥ ಸಂದರ್ಭಗಳು ಎದುರಾಗುತ್ತಿವೆ. ತಮ್ಮ ಸಿದ್ಧ ಯೋಚನೆಗಳ ಜಾಡಿನಿಂದ ಹೊರಬರಲು ಅಂಥವರಿಗೆ ಎಂದೂ ಸಾಧ್ಯವಾಗದು. ಸತ್ಯ ಒಪ್ಪಲು ಮುಕ್ತ ಮನಸು ಬೇಕು. ಅದು ವೈಯಕ್ತಿಕವಾಗಿ ಲಾಭಕರವಲ್ಲದಿದ್ದರೆ ಯಾಕೆ ಒಪ್ಪಬೇಕೆಂಬ ಲೆಕ್ಕಾಚಾರವೂ ಕೆಲಸ ಮಾಡುತ್ತದೆ. ಬುದ್ಧಿಯ